# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/103/ಮೀಇಯೋ/2015 ದಿನಾಂಕ: 13-10-2015.

(2) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿಯ ದಿನಾಂಕ: 16-06-2016 ರ ಸಭೆಯ ನಡವಳಿ.

(3) ಕೃಷಿ ಇಲಾಖೆ ಆದೇಶ ಸಂಖ್ಯೆ: ಎಜಿಡಿ/121/ಎಎಂಎಸ್/2016 ದಿನಾಂಕ: 04-08-2016.

(4) ಪತ್ರ ಸಂಖ್ಯೆ: ಮೀನಿ/04/ಆರ್‌ಕೆವಿವೈ/2016, ದಿನಾಂಕ: 17-08-2016.

******

## ಪ್ರಸ್ತಾವನೆ:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ವಿಶೇಷ ಅಭಿವೃದ್ಧಿ ಯೋಜನೆಯನ್ನು 2015-16ನೇ ಸಾಲಿನಲ್ಲಿ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಂತೆ ಅನುಷ್ಠಾನಗೊಳಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 16-06-2016 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ನಡವಳಿಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ 14ನೇ ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯು ಯೋಜನೆ ಅನುಷ್ಠಾನಕ್ಕೆ ಅನುಮೋದನೆ ನೀಡಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ ಇಲಾಖೆಗೆ 2016-17ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೊದಲನೇ ಕಂತಾಗಿ ರೂ.1.70 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗೆ ರೂ.0.27 ಕೋಟಿ ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ರಾಜ್ಯದಲ್ಲಿ ಮೀನುಗಾರಿಕೆಯು ಅತಿ ಮುಖ್ಯವಾದ ಕಸುಬಾಗಿದೆ. ಕರ್ನಾಟಕ

-2-

ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶವನ್ನು ಮತ್ತು 27000 ಚ.ಕಿ.ಮೀ. ಖಂಡಾವರಣ ಪ್ರದೇಶವನ್ನೂ ಹೊಂದಿದೆ. ಅಲ್ಲದೇ, ರಾಜ್ಯವು 5.65 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣದ ಒಳನಾಡು ಜಲಸಂಪನ್ಮೂಲ ಹೊಂದಿದೆ. ಇದರ ಜೊತೆಗೆ ಸುಮಾರು 2200 ಮೀನು ಕೃಷಿಕರು ಅಂದಾಜು 1800 ಹೆಕ್ಟೇರ್ ಪ್ರದೇಶದಲ್ಲಿ ಸ್ವಂತ ಜಮೀನಿನಲ್ಲಿ ಕೊಳ ನಿರ್ಮಾಣ ಮಾಡಿ ಮೀನು ಕೃಷಿಯನ್ನು ನಡೆಸುತ್ತಿದ್ದಾರೆ. ಈ ರೀತಿ ಸ್ವಂತ ಜಮೀನಿನಲ್ಲಿ ಕೊಳ ನಿರ್ಮಿಸಿ, ಸಾಂದ್ರೀಕೃತ ರೀತಿಯಲ್ಲಿ (Intensive) ಮೀನು ಕೃಷಿಗೆ ವಿಫುಲ ಅವಕಾಶವಿದೆ. 2015-16ನೇ ಸಾಲಿನಲ್ಲಿ 1.68 ಲಕ್ಷ ಟನ್ ಮೀನು ಉತ್ಪಾದನೆಯಾಗಿದೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ರಚಿಸಲಾಗಿರುವ ಡಾ॥ ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ರಾಜ್ಯದ 114 ತಾಲ್ಲೂಕುಗಳನ್ನು ಹಿಂದುಳಿದ, ಅತಿ ಹಿಂದುಳಿದ ಹಾಗೂ ತೀರಾ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಸದರಿ ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ನೀಡಿ ಸಮಗ್ರವಾಗಿ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ. ಸದರಿ ಯೋಜನೆಯಡಿ 3 ಉಪ ಘಟಕಗಳನ್ನು ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 99 ಮೀಇಯೋ 2016, ಬೆಂಗಳೂರು ದಿನಾಂಕ: 05-10-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ **ವಿಶೇಷ** ಅಭಿವೃದ್ಧಿ ಯೋಜನೆಯನ್ನು ಡಾ॥ ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾಗಿರುವ ಹಿಂದುಳಿದ 114 ತಾಲ್ಲೂಕುಗಳಲ್ಲಿ ಕೆಳಕಂಡ 3 ಉಪ ಘಟಕಗಳನ್ನು ಈ ಆದೇಶದ **ಅನುಬಂಧ-1**ರಲ್ಲಿ ನಮೂದಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನ ಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

| ಕ್ರ. ಸಂ. | ಉಪಘಟಕಗಳು | ಘಟಕ ವೆಚ್ಚ ಹಾಗೂ ಸಹಾಯಧನ | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1. | ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಲು ಮೀನುಗಾರರಿಗೆ ಸಹಾಯ (150 ಫಲಾನುಭವಿಗಳು) | ಘಟಕ ವೆಚ್ಚ: ಗರಿಷ್ಠ ರೂ.10,000/ ಕಿಟ್‌ಗೆ ಸಹಾಯಧನ: 100% | 15.00 |

| | | | |
|---|---|---|---|
| 2. | ಮೀನು ಮಾರಾಟಕ್ಕೆ ಸಹಾಯ (100 ಫಲಾನುಭವಿಗಳು) | ಘಟಕ ವೆಚ್ಚ: ಗರಿಷ್ಠ ರೂ.40,000 ಸಹಾಯಧನ: 50% | 20.00 |
| 3. | ಮೀನುಗಾರಿಕೆ ಅಭಿವೃದ್ಧಿಗಾಗಿ ಮೀನುಗಾರರ ಸಹಕಾರ ಸಂಘಗಳಿಗೆ ಸಹಾಯ (100 ಮೀ.ಸ.ಸಂಘ) | ಘಟಕ ವೆಚ್ಚ: ರೂ.15,000 ಪ್ರತಿ ಮೀನುಗಾರರ ಸಹಕಾರ ಸಂಘಕ್ಕೆ ಸಹಾಯಧನ: 100% | 15.00 |
| | | **ಒಟ್ಟು ಯೋಜನಾ ಮೊತ್ತ** | 50.00 |

ಈ ಯೋಜನೆಯಡಿ ಉಂಟಾಗುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2401-00-800-1-57-133 ರಡಿ ಮೀನುಗಾರಿಕೆ ಇಲಾಖೆಗೆ ಬಿಡುಗಡೆ ಮಾಡುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು **ದಿನಾಂಕ:** 16-06-2016 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 14ನೇ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಸಭೆಯ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
5/10/16
(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

05/10/16

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು
4) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ಆಂತರಿಕ ಆರ್ಥಿಕ ಸಲಹೆಗಾರರು, ಪಸಂಮೀ ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
7) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.

ಆದೇಶ ಸಂಖ್ಯೆ: ಪಸಂಮೀ 99 ಮೀಇಯೋ 2016, ಬೆಂಗಳೂರು ದಿನಾಂಕ: 05-10-2016 ರ

# ಅನುಬಂಧ-1

## ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಗಳು

1. **ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಲು ಮೀನುಗಾರರಿಗೆ ಸಹಾಯ:**

- ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 105 ಮೀಇಯೋ 2009 ದಿನಾಂಕ: 16/7/2009 ರಲ್ಲಿನ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅನುಷ್ಠಾನಗೊಳಿಸುವುದು.
- ಹೆಚ್ಚಿನ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸುವುದು. ಅರ್ಹ ಫಲಾನುಭವಿಗಳ ಸಂಖ್ಯೆ ಜಾಸ್ತಿಯಿದ್ದಲ್ಲಿ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

2. **ಮೀನು ಮಾರಾಟಕ್ಕೆ ಸಹಾಯ:**

- ಅರ್ಜಿದಾರ ಮೀನುಗಾರರು ಅಥವಾ ಮೀನುಗಾರ ಮಹಿಳೆಯರು ಸಕ್ರಿಯವಾಗಿ ಮೀನು ವ್ಯಾಪಾರದಲ್ಲಿ ತೊಡಗಿರಬೇಕು.
- ಫಲಾನುಭವಿಗಳು ಮೀನುಗಾರಿಕೆ ಸಹಕಾರ ಸಂಘಗಳ ಸದಸ್ಯರಾಗಿರಬೇಕು.
- ಈ ಯೋಜನೆಯಡಿ ಗರಿಷ್ಠ ರೂ.40,000-00 ಘಟಕ ವೆಚ್ಚದಲ್ಲಿ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆಯನ್ನು ಖರೀದಿಸಲು 50% ಗರಿಷ್ಠ ರೂ.20,000-00 ಗಳ ಸಹಾಯಧನ ನೀಡಲಾಗುವುದು.
- ಸದರಿ ಯೋಜನೆಯಡಿಯಲ್ಲಿ ಪ್ರಯೋಜನವನ್ನು ಪಡೆಯಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳ ಮೂಲಕ ಅಧಿಕೃತ ವಾಹನ ಸರಬರಾಜುದಾರರಿಂದ Invoice / ದರಪಟ್ಟಿಯೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ವಾಹನವನ್ನು ಮೀನು ಸಾಗಾಣಿಕೆ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
- ವಾಹನವನ್ನು ಖರೀದಿಸಿದ ದಿನಾಂಕದಿಂದ 5 ವರ್ಷಗಳವರೆಗೆ ಬೇರೆಯವರಿಗೆ ಮಾರಾಟ ಅಥವಾ ಪರಭಾರೆ ಮಾಡತಕ್ಕದ್ದಲ್ಲ. ಈ ಮಾಹಿತಿಯನ್ನು ವಾಹನ ನೋಂದಣಿ ದಾಖಲಾತಿಯಲ್ಲಿ ನಮೂದಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಗಳ ಮೂಲಕ ಕ್ರಮವಹಿಸುವುದು.
- ಮೀನುಗಾರಿಕೆ ಉಪ ನಿರ್ದೇಶಕರು ಸಹಾಯಧನವನ್ನು ಮಂಜೂರು ಮಾಡುವ ಸಮಯದಲ್ಲಿ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಸದರಿ ವಾಹನವನ್ನು ಮೀನುಗಾರಿಕೆಗೆ ಸಂಬಂಧಿಸಿದ ಉಪಯೋಗಕ್ಕೆ ಮಾತ್ರ ಉಪಯೋಗಿಸಿ ಕೊಳ್ಳುವುದಕ್ಕೆ ಖಾತ್ರಿಪಡಿಸಿಕೊಳ್ಳುವುದು. ಅರ್ಹ ಫಲಾನುಭವಿಗಳ ಸಂಖ್ಯೆ ಜಾಸ್ತಿಯಿದ್ದಲ್ಲಿ ಲಾಟರಿ ಮೂಲಕ ಫಲಾನುಭವಿಗಳ ಆಯ್ಕೆ ಮಾಡುವುದು.